## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 22-03-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ

## *ಸಭಾ ನಡವಳಿಗಳು.*

**ವಾರ್ಡ್ ಸಂಖ್ಯೆ-76 ಗಾಯತ್ರಿನಗರ** **ಸಮಯ: ಬೆಳಗ್ಗೆ : 11:00 ಘಂಟೆಗೆ**

ದಿನಾಂಕ: 22-03-2022 ರಂದು ವಾರ್ಡ್ ಸಂಖ್ಯೆ: 76ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು.

ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು, ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-76 ಗಾಯತ್ರಿನಗರ |
| 2 | ಶ್ರೀ ಸತೀಶ್‌ಕುಮಾರ್.ಬಿ, ಸಹಾಯಕ ಅಭಿಯಂತರರು, ವಾರ್ಡ್-76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 4 | ಪವನ್‌ಕುಮಾರ್, ಬಿಡ್ಲ್ಯೂಎಸ್ಎಸ್‌ಬಿ |
| 5 | ಎನ್. ಬಸವರಾಜ್, ಬಿಡ್ಲ್ಯೂಎಸ್ಎಸ್‌ಬಿ |
| 6 | ಶ್ರೀಮತಿ ಶಾರದ, ಹಿರಿಯ ಆರೋಗ್ಯ ಪರಿವೀಕ್ಷಕರು |
| 7 | ಕೆ. ಗೋವಿಂದರಾಜು, ಸ್ಯಾನಿಟರಿ ದಫೇದಾರ್ |
| 8 | ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |
| 9 | ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 11 | ಶ್ರೀನಿವಾಸ್.ಬಿ ಮಾರ್ಷಲ್ |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**BWSSB ಇಲಾಖೆ:**

- Leakage ಗಳನ್ನು ಸರಿಪಡಿಸಲು ಹಾಗೂ ಪೈಪ್ ಅಳವಡಿಸಲು ಅಗೆದಿರುವ ಎಲ್ಲಾ Culvert ಗಳನ್ನು ಕಾಂಕ್ರೀಟ್ ಹಾಕಿ ತಾಂತ್ರಿಕ ರೀತಿಯಲ್ಲಿ ಸರಿಪಡಿಸಲು ಸೂಚಿಸಲಾಯಿತು. ಡಿ ಬ್ಲಾಕ್‌ನಲ್ಲಿ ಪೈಪ್ ಅಳವಡಿಸುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪ್ರಾರಂಭಿಸಿ ಮುಗಿಸಲು ಸೂಚಿಸಲಾಯಿತು.

**ಆರೋಗ್ಯ ಇಲಾಖೆ :**

- Duty Doctor ರವರು ವಾರಕ್ಕೆ ಎರಡು ದಿನ ಮಾತ್ರ ಬರುತ್ತಿದ್ದು, ಇದರಿಂದಾಗಿ ಸದರಿ ವಾರ್ಡ್‌ನಲ್ಲಿರುವ ರೋಗಿಗಳಿಗೆ ತುಂಬಾ ಅನಾನುಕೂಲವಾಗುತ್ತಿರುವುದರಿಂದ ವಾರ ಪೂರ್ತಿ ವೈದ್ಯರನ್ನು ನಿಯೋಜಿಸಲು Resolution ಮಾಡಲು ಹಾಗೂ ವೈದ್ಯಾಧಿಕಾರಿಗಳಿಗೆ ಪ್ರತಿಯನ್ನು ಕಳುಹಿಸಲು ಸೂಚಿಸಲಾಯಿತು.

**ಮಾರ್ಷಲ್‌ರವರು:**

- ಸಭೆಯಲ್ಲಿ ಮಾರ್ಷಲ್ ರವರು ಹಾಜರಿದ್ದು, ಪ್ಲಾಸ್ಟಿಕ್ ಬಳಕೆ ಹಾಗೂ ಕಸ ವಿಂಗಡಣೆ ಮಾಡದಿರುವುದಕ್ಕೆ ದಂಡ ವಿಧಿಸುತ್ತಿರುವುದಾಗಿ ತಿಳಿಸಿದರು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಎಲ್ಲಾ ಕಡೆ ಸಮರ್ಪಕವಾಗಿ ಕಸ ವಿಲೇವಾರಿ ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಮಾರ್ಕೆಟ್, ಕನ್ಸರ್ವೆನ್ಸಿ, ರೈಲ್ವೆ ಸಮನಾಂತರ ರಸ್ತೆ ಎಲ್ಲೆಡೆ ಕಸ ವಿಲೇವಾರಿ ಹಾಗೂ ನಿರ್ವಹಣೆ ಮಾಡಲು ಸೂಚಿಸಿರುತ್ತಾರೆ.

**ಕಾಮಗಾರಿ ಇಲಾಖೆ**

- ನೃತ್ಯ ಶಾಲೆ ನಡೆಸುತ್ತಿರುವ ಕಟ್ಟಡವನ್ನು ಹಸ್ತಾಂತರಿಸಿಕೊಂಡು ಬಿಬಿಎಂಪಿಯ ಕಂದಾಯ ಇಲಾಖೆಗೆ ಹಸ್ತಾಂತರಿಸಲು ಸೂಚಿಸಿರುತ್ತಾರೆ.
- ಮಳೆ ಇನ್ನು 2 ದಿನ ಬರುವ ಸಾಧ್ಯತೆ ಇದ್ದು, ತಗ್ಗು ಪ್ರದೇಶಗಳ ಬಗ್ಗೆ ನಿಗಾ ವಹಿಸಲು ಸೂಚಿಸಲಾಯಿತು.
- ಆರೋಗ್ಯ ಇಲಾಖೆಯೊಂದಿಗೆ ಹರಿಶ್ಚಂದ್ರ ಘಾಟ್‌ನಲ್ಲಿ Intensive Cleaning ಕ್ರಮಕೈಗೊಳ್ಳಲು ನಿರ್ಧರಿಸಲಾಯಿತು.
- ಪೋಸ್ಟ್ ಆಫೀಸ್ ಬಳಿ ಡೆಬ್ರಿಸ್ ತೆರವುಗೊಳಿಸಲು ಸೂಚಿಸಿರುತ್ತಾರೆ.
- ಮುಂದಿನ ಸಭೆಗೆ ಪೊಲೀಸ್ ಇಲಾಖೆಯವರನ್ನು ಆಮಂತ್ರಿಸಲು ಸೂಚಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,
ಸಹಾಯಕ ಅಭಿಯಂತರರು, ವಾರ್ಡ್–76
ಗಾಯತ್ರಿನಗರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ

ಅಧ್ಯಕ್ಷರು
ನೋಡಲ್ ಅಧಿಕಾರಿಗಳು, ವಾರ್ಡ್–76
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ